## 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

ಸಿ.ಸಿ,ನಂ.1738/2018

ಫಿರ್ಯಾದಿ ಟ್ರಾಫಿಕ್ ಪೊಲೀಸ್ ಠಾಣೆ, ನಂಜನಗೂಡು

ವಿರುದ್ಧ

ಆರೋಪಿ 1. ಚಂದ್ರಶೇಖರ, 30 ವರ್ಷ,

ಕೆಸ್ತೂರು ಗ್ರಾಮ,ನಂಜನಗೂಡು ತಾಲ್ಲೂಕು.

## ಆಪಾದನೆ

ಶ್ರೀಮತಿ ವಿನುತ ಡಿ. ಎಸ್., ಬಿ.ಎಸ್ಸಿ (ಅಗ್ರಿಕಲ್ಚರ್) , ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರಾದ ನಾನು ನಿಮ್ಮ ಮೇಲೆ ಅಪಾದಿಸುವುದೇನೆಂದರೆ:

ದಿನಾಂಕ:*18.07.2018* ರಂದು ಮಧ್ಯಾಹ್ನ ಸುಮಾರು *12.20* ಗಂಟೆ ಸಮಯದಲ್ಲಿ ನಂಜನಗೂಡು ಪಟ್ಟಣ ಪೋಲೀಸ್ ಠಾಣಾ ಸರಹದ್ದು ನಂಜನಗೂಡು - ಮೈಸೂರು ಮುಖ್ಯ ರಸ್ತೆ ಬಸವನಪುರ ಗ್ರಾಮಕ್ಕೆ ಹೋಗುವ ಕ್ರಾಸ್ ಹತ್ತಿರ ಗಾಯಾಳು *02* ನೇ ಆರೋಪಿಯ ಬಾಬ್ತು ಕೆಎ-*09*-ಹೆಚ್ ಎಫ್-*1758* ರ ನಂಬರಿನ ಹೊಂಡಾ ಸ್ಕೂಟರಿನಲ್ಲಿ ನಂಜನಗೂಡು ಕಡೆಯಿಂದ ಮೈಸೂರು ಕಡೆಗೆ ಹೋಗುತ್ತಿದ್ದಾಗ *01* ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-*09*-ಎಫ್-*4251* ರ ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ಸನ್ನು ನಂಜನಗೂಡು ಕಡೆಯಿಂದ ಮೈಸೂರು ಕಡೆಗೆ ಯಾವುದೇ ಸೂಚನೆಯನ್ನು ನೀಡದೇ ಬಸವನಪುರ ಗ್ರಾಮದ ಕಡೆಗೆ ಹೋಗುವ ಕ್ರಾಸ್ ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಓಡಿಸಿಕೊಂಡು ಬಂದಿದ್ದು ಆ ಮೂಲಕ ಆರೋಪಿಯಾದ ನೀವು ಭಾ ದಂ ಸಂ ಕಲಂ *279* ರ ಪ್ರಕಾರ ಶಿಕ್ಷಾರ್ಹ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ *1* ನೇ ಆರೋಪಿಯಾದ ನೀವು ಸದರಿ ವಾಹನವನ್ನು ಅತಿವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬಲಭಾಗಕ್ಕೆ ತಿರುಗಿಸಿ ಡಿಕ್ಕಿ ಮಾಡಿದ ಪರಿಣಾಮ *02* ನೇ ಆರೋಪಿಯು ಮೋಟಾರ್ ಸೈಕಲಿನ ಸಮೇತ ಕೆಳಗೆ ಬಿದ್ದು ಎಡಕೈ ಹಾಗೂ ಎಡಕಾಲಿಗೆ ತೀವ್ರ ಸ್ವರೂಪದ ಗಾಯಗಳಾದ ಕಾರಣ ಭಾ ದಂ ಸಂ ಕಲಂ *338* ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಪ್ರಶ್ನೆ: 1 ಈಗ ನಿಮಗೆ ಓದಿ ಹೇಳಿದ ಅಪಾದನೆ ತಿಳಿಯಿತೇ?

1 ನೇ ಆರೋಪಿ ಉತ್ತರ: ತಿಳಿಯಿತು.

ಪ್ರಶ್ನೆ: 2 ಮೇಲ್ಕಂಡ ಆರೋಪವನ್ನು ನೀವು ಒಪ್ಪಿಕೊಳ್ಳುವಿರೋ ಅಥವಾ ಪ್ರತಿರಕ್ಷೆ ಮಾಡಿಕೊಳ್ಳುವಿರೋ ?

1 ನೇ ಆರೋಪಿ ಉತ್ತರ: ತಪ್ಪು ಮಾಡಿಲ್ಲ. ವಿಚಾರಣೆಯಾಗಲಿ.

ಮೇಲ್ಕಂಡ ಅಪಾದನೆಯನ್ನು ಆರೋಪಿಗೆ ಓದಿ ಹೇಳಿ ಆತನು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿ ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದಿನಾಂಕ: 15/3/4 ರಂದು ದೃಢೀಕರಿಸುತ್ತೇನೆ.

15/3/4

*2* ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,

ನಂಜನಗೂಡು .

# 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

**ಸಿ.ಸಿ. ನಂ.1738/2018**

ಫಿರ್ಯಾದಿ

ಆರಕ್ಷಕ ಉಪನಿರೀಕ್ಷಕರು, ಟ್ರಾಫಿಕ್ ಪೊಲೀಸ್ ಠಾಣೆ,
ನಂಜನಗೂಡು.

ವಿರುದ್ಧ

ಆರೋಪಿತರು

2. ಮೋಹನ್ ಕುಮಾರ್, 23 ವರ್ಷ,
3. ನಿಂಗರಾಜು ಉಃನಿಂಗರಾಜು, 23 ವರ್ಷ,
ಇಬ್ಬರೂ ದೊಡ್ಡಕಾನ್ಯ ಗ್ರಾಮ, ಮೈಸೂರು ತಾಲ್ಲೂಕು ,

## ಆರೋಪಣೆ

ಶ್ರೀಮತಿ ವಿನುತ ಡಿ. ಎಸ್., ಬಿ.ಎಸ್ಸಿ (ಸೆರಿಕಲ್ಚರ್), ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರಾದ ನಾನು ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 18-07-2018 ರಂದು ಮಧ್ಯಾಹ್ನ 12.20 ಗಂಟೆ ಸಮಯದಲ್ಲಿ ನಂಜನಗೂಡು ಸಂಚಾರಿ ಪೊಲೀಸ್ ಠಾಣಾ ಸರಹದ್ದು ನಂಜನಗೂಡು - ಮೈಸೂರು ಮುಖ್ಯ ರಸ್ತೆ, ಬಸವನಪುರ ಗ್ರಾಮಕ್ಕೆ ಹೋಗುವ ಕ್ರಾಸ್ ಹತ್ತಿರ 2 ನೇ ಆರೋಪಿಯಾದ ನಿಮ್ಮ ಬಾಬ್ತು ಕೆಎ-09-ಹೆಚ್‌ಎಫ್-1758 ನಂಬರಿನ ಹೊಂಡಾ ಸ್ಕೂಟರಿಗೂ ಕೆಎ-09-ಎಫ್-4251 ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ಸಿಗೂ ಅಪಘಾತವಾಗಿದ್ದು, ಅಪಘಾತದ ಸಮಯದಲ್ಲಿ 2 ನೇ ಆರೋಪಿಯಾದ ನೀವು ಸದರಿ ಸ್ಕೂಟರನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರವನ್ನು ಹೊಂದದೆ ಚಾಲನೆಮಾಡಿದ್ದು ಆ ಮೂಲಕ ನೀವು ಮೋಟಾರು ವಾಹನ ಕಾಯ್ದೆ 181 ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಸ್ಥಳದಲ್ಲಿ 3 ನೇ ಆರೋಪಿಯಾದ ನೀವು ಸದರಿ ಕೆಎ-09-ಹೆಚ್‌ಎಫ್-1758 ನಂಬರಿನ ಹೊಂಡಾ ಸ್ಕೂಟರಿನ ಮಾಲೀಕರಾಗಿದ್ದು, ಚಾಲನಾ ಪರವಾನಗಿ ಹೊಂದದೆ ಇರುವ 2 ನೇ ಆರೋಪಿಗೆ ನಿಮ್ಮ ಸ್ಕೂಟರನ್ನು ಚಾಲನೆಮಾಡಲು ನೀಡಿದ್ದು ಆ ಮೂಲಕ ನೀವು ಮೋಟಾರು ವಾಹನ ಕಾಯ್ದೆ 180 ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಸದರೀ ಆರೋಪಣೆಯು ನನ್ನ ಸಂಜ್ಞಾನದಲ್ಲಿದ್ದು ವಿಚಾರಣೆಯು ಇದೇ ನ್ಯಾ ಯಾಲಯದಲ್ಲಿ ನಡೆಯುವಂತೆ ನಾನು ನಿರ್ದೇಶಿಸಿರುತ್ತೇನೆ.

**ಪ್ರಶ್ನೆ:1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?**

**2 ನೇ ಆರೋಪಿ ಉತ್ತರ:-** ತಿಳಿಯಿತು.

**3 ನೇ ಆರೋಪಿ ಉತ್ತರ:-** ತಿಳಿಯಿತು.

**ಪ್ರಶ್ನೆ:2: ಮೇಲ್ಕಂಡ ಆರೋಪವನ್ನು ನೀವು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರೋ?**

**2 ನೇ ಆರೋಪಿ ಉತ್ತರ:-** ತಪ್ಪು ಒಪ್ಪಿಕೊಳ್ಳುತ್ತೇನೆ.

**3 ನೇ ಆರೋಪಿ ಉತ್ತರ:-** ತಪ್ಪು ಒಪ್ಪಿಕೊಳ್ಳುತ್ತೇನೆ.

ಮೇಲ್ಕಂಡ ಅಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿ ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದಿ: 02/01/2020 ರಂದು ದೃಢೀಕರಿಸುತ್ತೇನೆ

2/1/20

**2 ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.**
**ನಂಜನಗೂಡು**

Mohankumar

[signature]